webinar
2020-21

Take printout with SJMWC name

# ಸಿದ್ಧಮಂಗಳಾ ಸೇವಾಕೇಂದ್ರ

ದಿ.ಶ್ರೀ ಎಸ್.ಪಿ ಮಳೀಮಠ ಮತ್ತು ಶ್ರೀಮತಿ ದಿ. ಶ್ರೀಮತಿ ಸುಮಂಗಲಾದೇವಿ. ಎಸ್ ಮಳೀಮಠ
ನಂ–1207, ಯಲಹಂಕ ಉಪನಗರ, ಗಣೇಶ ದೇವಸ್ಥಾನದ ಬಳಿ, ಬೆಂಗಳೂರು–64.

ಮಹಿಳಾ

## ಎಸ್.ಜೆ.ಎಂ ಕಲಾ ~~ಹಾಗೂ ವಾಣಿಜ್ಯ~~ ಮಹಾವಿದ್ಯಾಲಯ ?

ಕನ್ನಡ ವಿಭಾಗ, ಬಿ.ಡಿ ರಸ್ತೆ ಚಿತ್ರದುರ್ಗ–01

ಹಾಗೂ

## ಬಸವ ಬಳಗ, ಮಸ್ಕತ್

ಜಗದಗಲ ಮಂಟಪ–ಜ್ಞಾನ ದಾಸೋಹ ಪ್ರಯುಕ್ತ

## ಅಂತರರಾಷ್ಟ್ರೀಯ ವಿಚಾರ ಸಂಕಿರಣ(ವೆಬಿನಾರ್)

**ವಿಷಯ:–** ## ವಚನ ಸಾಹಿತ್ಯ ಬಯಲೊಳಗಣ ರೂಪು

ದಿನಾಂಕ–30.07.2020

ಗುರುವಾರ ಸಂಜೆ–5:30 ಗಂಟೆಗೆ (IST)

**ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ**



ಉದ್ಘಾಟನೆ :

**ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು**

ಪೂಜ್ಯಪೀಠಾಧ್ಯಕ್ಷರು,
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ,
ಚಿತ್ರದುರ್ಗ.

Scanned with CamScanner

Siddamangala Seva Kendra

**S J M ARTS COLLEGE FOR WOMEN, CHITRADURGA**

**Department of Kannada & Basava Balaga Muscut**

**In Association with**

**International Webinar on**

**Vachana Literature – Image in the open**

**Date: 30.07.2020** **Time: 5.30 PM**

**Place: SJM Women's Rajatha Sabhangana**

| | | |
|---|---|---|
| Invocation Song | : | Kum. Nandakumari |
| Inauguration | : | His Holiness<br>Dr. Shivamurthy Murugha Sharanaru<br>Sri Murugha math, Chitradurga |
| Chief Guest | : | Sri. Neelakanta Hangaragi<br>Muscut |
| Convener | : | Dr. C.T. Jayanna<br>HOD of Kannada<br>Prof. Jayashree M. Odeyar<br>President, Siddamangala Seva Kendra, Bangalore |
| Welcome | : | Dr. P. Shivalingappa<br>Principal S J M Arts College for Women, Chitradurga |
| Key note Address | : | Dr. Sheeladevi S. Malimath<br>Programme Director, Bangalore |
| Seminar 01 | : | Vachana Literature – Image in the open<br>Sri Ramjan Durga, Vachana Literary Thinkers<br>Dharwad |
| Seminar 02 | : | Insights into Vachana literature<br>Smt. Sudha Shashikanth, Yoga Teacher, Muscut |

Scanned with CamScanner

| | | |
|---|---|---|
| Seminar 03 | : | A Survey of Vachana Literature<br>Sri Shivaprakash S.C.<br>Engineer, Muscut |
| Vote of Thanks | : | Dr. Suma R.<br>Associate Professor |

PRINCIPAL
B.J.M. Arts College for women,
CHITRADURGA - 577 501.
Karnataka.

Scanned with CamScanner

Siddamangala Seva Kendra, Bangalore ,SJM Arts College for Women,Chitradurga (IQAC) Dept of Kannada and Basava Balaga, Muscat

In association with International Webinar on Vachana Literature – Image in the Open on 30-07-2020 at 5:30 PM His Holiness Dr Shivamurthy Murugha Sharanaru Inauguration of this Webinar and Speaking Inaugural address

Kannada Prabha, Kannada Daily News Paper on 01 - 08- 2020

**ವಚನ ಚಿಂತನ** ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟನೆಯಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರ ಸಮರ್ಥನೆ

# ವಚನಗಳ ಮೂಲಕ ದೇಶಕ್ಕೆ ಪರಿಣಾಮಕಾರಿ ಸಿದ್ಧಾಂತ ಕೊಡುಗೆ

• **ಕನ್ನಡಪ್ರಭವಾರ್ತೆ** ಚಿತ್ರದುರ್ಗ

ಹನ್ನೆರಡನೇ ಶತಮಾನದ ಕಾಯಕ ಜೀವಿಗಳು ವಚನಗಳ ಮೂಲಕ ದೇಶಕ್ಕೆ ಪರಿಣಾಮಕಾರಿ ಸಿದ್ಧಾಂತವನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದು ಬಸವಕೇಂದ್ರ ಮುರುಘಾಮಠದ ಡಾ.ಶಿವಮೂರ್ತಿ ಮುರುಘಾಶರಣರು ಹೇಳಿದರು.

ಸಿದ್ಧಮಂಗಳಾ ಸೇವಾಕೇಂದ್ರ, ಎಸ್‌ಜೆಎಂ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬಸವ ಬಳಗ ಮಸ್ಕತ್ ಸಹಯೋಗದಲ್ಲಿ ಮುರುಘಾಮಠದಲ್ಲಿನಡೆದಅಂತಾರಾಷ್ಟ್ರೀಯ ವಿಚಾರ ಸಂಕಿರಣ (ವೆಬಿನಾರ್)ದಲ್ಲಿ ವಚನ ಸಾಹಿತ್ಯ ಬಯಲೊಳಗಣ ರೂಪು ವಿಷಯ ಕುರಿತು ಮಾತನಾಡಿದರು.

ವಿಧಾಯಕವಾದ ಸಿದ್ಧಾಂತ ಕೊಟ್ಟಂತಹ ದಾರ್ಶನಿಕರು ಜಗತ್ತಿನಲ್ಲಿದ್ದಾರೆ. ಭಾರತದ ಇತಿಹಾಸದಲ್ಲಿ ಶಾಸ್ತ್ರಗಳು, ವೇದಾಗಮಗಳಲ್ಲಿ ಕೆಲ ವಿಚಾರಗಳನ್ನು ಸಂಸ್ಕೃತ ಭಾಷೆಯ ಮೂಲಕರಾಷ್ಟ್ರಕ್ಕೆಕೊಟ್ಟಿದ್ದಾರೆ.900 ವರ್ಷಗಳ ಹಿಂದೆ ಬಸವ, ಅಲ್ಲಮಾದಿ ಶರಣರು ಒಂದು ಸಿದ್ಧಾಂತ ನೀಡಿದರು. ಜಗತ್ತಿನ ಇತಿಹಾಸದಲ್ಲಿ 770 ಅಮರಗಣಂಗಳು ಅನುಭವ ಮಂಟಪದಲ್ಲಿ ಸಮಾವೇಶಗೊಂಡಂತಹ ಇತಿಹಾಸ ಹಾಗೂ ಪರಂಪರೆ ಎಲ್ಲಿಯೂ ಸಿಗುವುದಿಲ್ಲ. ವಚನಗಳಿಂದ ಕೊಟ್ಟ ಪರಿಣಾಮಕಾರಿ, ಪ್ರಾಯೋಗಿಕ ಸಿದ್ಧಾಂತವನ್ನು ಜನರು ಅರಿತುಕೊಳ್ಳುವ ಸಂದರ್ಭ ತಂದುಕೊಳ್ಳಬೇಕಿದೆ. ಎಲ್ಲ ವಿಚಾರಗಳನ್ನು ಶರಣರು ವಚನಗಳಲ್ಲಿ ಅಡಗಿಸಿಟ್ಟಿದ್ದಾರೆ. ಅವುಗಳು ಮಾತ್ರೆಗಳಿದ್ದಂತೆ ಎಂದರು.

ನಮ್ಮದು ಶೂನ್ಯಸಂಪಾದನೆ, ಶೂನ್ಯ ಸಿದ್ಧಾಂತ. ಅದಕ್ಕೆ ಬಯಲು ಎನ್ನುತ್ತಾರೆ. ಸರ್ವಜ್ಞತ್ವ, ಸರ್ವ ಕರ್ತೃತ್ವ, ಸರ್ವವ್ಯಾಪಕತ್ವವದು. ನಮ್ಮ ಶಿವ ನಿರಾಕಾರಿ. ಇದರ ವಿಶ್ಲೇಷಣೆ ಅತ್ಯಂತ ತರ್ಕಬದ್ಧವಾಗಿದೆ. ಶೂನ್ಯಸಿದ್ಧಾಂತವನ್ನು ಅಲ್ಲಗಳೆಯಲು ಬರುವುದಿಲ್ಲ. ಇಡೀ ಬ್ರಹ್ಮಾಂಡದಲ್ಲಿ 9 ಗ್ರಹಗಳನ್ನು ನೋಡುತ್ತೇವೆ. ಸಾವಿರಾರು ನಕ್ಷತ್ರಗಳಿವೆ. ಒಂದು ಗ್ರಹ ಮತ್ತೊಂದು ಗ್ರಹದ ನಡುವೆ ಶೂನ್ಯ ಇರುವುದರಿಂದಲೇ ಅವುಗಳ ಮಧ್ಯೆ ಡಿಕ್ಕಿ ಆಗುವುದಿಲ್ಲ. ಇಂತಹ ಉದಾತ್ತವಾಗಿರುವ ಬಯಲ ತತ್ವಸಿದ್ಧಾಂತವನ್ನು ಶರಣರು ನಮಗೆ ಕೊಟ್ಟು ಹೋಗಿದ್ದಾರೆ ಎಂದರು.



ಮುರುಘಾಮಠದಲ್ಲಿ ನಡೆದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ (ವೆಬಿನಾರ್)ದಲ್ಲಿ ವಚನ ಸಾಹಿತ್ಯ ಬಯಲೊಳಗಣ ರೂಪು ಕುರಿತು ಶಿವಮೂರ್ತಿ ಶರಣರು ಮಾತನಾಡಿದರು.

ವಿದ್ಯಾಬುದ್ಧಿ ಇರುವಲ್ಲಿ ಬ್ರಹ್ಮ, ಶಾಂತಿ ಸೈರಣೆ ಇರುವಲ್ಲಿ ವಿಷ್ಣು, ಕೋಪ ತಾಪ ಇರುವಲ್ಲಿ ರುದ್ರ ಇರುತ್ತಾನೆ ಎಂದು ಚೆನ್ನಬಸವಣ್ಣ ಹೇಳುತ್ತಾರೆ. ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು ಎಂಬುದಾಗಿ ಅಲ್ಲಮಪ್ರಭು ಹೇಳಿದ್ದಾರೆ. ಅಂಗೈಯಲ್ಲಿ ಲಿಂಗವನ್ನು ಹಿಡಿದು ಧ್ಯಾನಮಾಡಿ ನಿರ್ಬಯಲ ತತ್ವವನ್ನು ಆಸ್ವಾದಿಸುವುದು, ಎಲ್ಲವು ಇದ್ದು ಏನೂ ಇಲ್ಲದಂತಿರುವುದೇ ಇದರ ತತ್ವ. ಎಲ್ಲವನ್ನು ಒಳಗೊಂಡಿದ್ದು ಎಲ್ಲವನ್ನು ಮೀರಿದ್ದು ಈ ಶೂನ್ಯ ತತ್ವವೆಂದು ಶಿಮುಶ ಹೇಳಿದರು.

ಚಿಂತಕ ರಂಜಾನ್‌ದರ್ಗಾ ಮಾತನಾಡಿ ಎಲ್ಲವೂ ಬಯಲಿನಿಂದ ಬಂದಿದ್ದು ಮತ್ತೆ ಬಯಲಲ್ಲಿ ಲೀನವಾಗುತ್ತದೆ ಎಂದು ಶ್ರೇಷ್ಠ ವಿಜ್ಞಾನಿ ಐನ್‌ಸ್ಟೈನ್ ವಚನಕಾರರು ಹೇಳಿದ್ದನ್ನೇ ಜಾಹೀರು ಮಾಡಿದ್ದಾರೆ. ಹಾಗಾಗಿ ಇದು ಅತ್ಯಂತ ವೈಜ್ಞಾನಿಕ ವಿಷಯವಾಗಿದೆ. ಚಿಂತನೆ ಮಾಡಬೇಕಿದೆ. ಅಲ್ಲಮಪ್ರಭು ಆ ಕಾಲದಲ್ಲಿ ಭರತಖಂಡವನ್ನು ಸುತ್ತಿ ಅನೇಕ ಚಿಂತನೆಗಳನ್ನು ಮಾಡಿದ ಮಹಾನುಭಾವರೆಂದರು.

ನೀಲಕಂಠ ಹಂಗರಗಿ ಅಧ್ಯಕ್ಷೀಯ ಭಾಷಣ ಮಾಡಿದರು. ಡಾ.ಶೀಲಾದೇವಿ ಎಸ್. ಮಳಿಮಠ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸುಧಾ ಶಶಿಕಾಂತ್, ಶಿವಪ್ರಕಾಶ್ ಎನ್.ಸಿ., ಪ್ರೊ. ಜಯಶ್ರೀ ಎಂ. ಒಡೆಯರ್ ಭಾಗವಹಿಸಿದ್ದರು.

ಕನ್ನಡ ಪ್ರಭ - 01-08-2020

PRINCIPAL
S.J.M. Arts College for women,
CHITRADURGA - 577 501
Karnataka.

01·8·2020.

20, ದಾವಣಗೆರೆ ಸಂಯುಕ್ತ ಕರ್ನಾಟಕ ಚಿತ್ರದುರ್ಗ

ಶ್ರಾವಣ ದರ್ಶನದಲ್ಲಿ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು

# ಸಮಸ್ಯಾತ್ಮಕರಾಗದೆ ಸಂಪನ್ಮೂಲರಾಗಿ



ದೇವರನ್ನು ನಂಬಿ ನಡೆಯುತ್ತಿದ್ದೇವೆ. ಯಾರಿಗೂ ಕೇಡನ್ನು ಬಯಸಿಲ್ಲ. ಆದರೂ ಕಷ್ಟಗಳು ಬರುತ್ತಿವೆಯಲ್ಲ ಎನ್ನುವವರು ಇದ್ದಾರೆ. ಧರ್ಮ, ದೇವರು ನಮ್ಮನ್ನು ಕೈಬಿಟ್ಟಿದೆ ಎನ್ನುವವರು ಇದ್ದಾರೆ. ಜನ ಕಷ್ಟ ಬಂದಾಗಲೆ ಬಸವಣ್ಣ ದೇವರು ಎನ್ನುತ್ತಾರೆ. ಸುಖ ಇದ್ದರೆ ಯಾರನ್ನೂ ನೆನಪಿಸಿಲ್ಲ. ದೇವರು ಯಾವುದನ್ನು ಕೇಳಿ ನಿರ್ಧರಿಸಿಲ್ಲ. ಇದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು.

ಚಿತ್ರದುರ್ಗ: ಸಮಾಜದಲ್ಲಿ ಸಮಸ್ಯಾತ್ಮಕ ವ್ಯಕ್ತಿಯಾಗದೆ ಸಂಪನ್ಮೂಲ ವ್ಯಕ್ತಿಯಾಗಿ ರೂಪುಗೊಳ್ಳಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಮುರುಘಾಮಠದಲ್ಲಿ ನಡೆದ ಶ್ರಾವಣದರ್ಶನ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಶರಣತ್ವ (ಸಂತತ್ವ) ಮತ್ತು ಸಂಕಟ ವಿಷಯ ಕುರಿತು ಮಾತನಾಡಿ, ಇದೊಂದು ಹಾರ್ದಿಕವಾದ ಸ್ಪರ್ಧೆ. ಸಂತ, ಶರಣ ಆಗದೇ ಹೋದರೂ ಸಂಪನ್ಮೂಲ ವ್ಯಕ್ತಿಗಳಾಗಬೇಕು. ಭಕ್ತಿ, ಯುಕ್ತಿ, ಶಕ್ತಿ ಇರುವವರು ಸಂಪನ್ಮೂಲ ವ್ಯಕ್ತಿಗಳಾಗುತ್ತಾರೆ ಮಠದಿಂದ ಅನನ್ಯ ಆಪ್ತವಾದ ಹೃದಯಸ್ಪರ್ಶಿಯಾದ ತಾತ್ವಿಕವಾದ ಬೌದ್ಧಿಕವಾದ ಚಿಂತನೆ ಅಂತರ್ಜಾಲದ ಮೂಲಕ ಕೊರೊನಾ ಕಾಟದ ನಡುವೆ ನಡೆಸುತ್ತ ಬರಲಾಗಿದೆ ಎಂದರು.

ವ್ಯವಸ್ಥಿತವಾದ ಜೀವನ ನಡೆಸುವವರು ಸಿದ್ಧಾಂತದೊಳಗೆ ಬರುತ್ತಾರೆ. ಇವ-ರಿಗೆ ಬೌದ್ಧಿಕ ಯಾನ ಸಹಕಾರಿ. ಇವರು ಸಮಾಜಕ್ಕೆ ಆಸ್ತಿಯಾಗುತ್ತಾರೆ. ಮಾನವ ಶಕ್ತಿಯೇ ಆಸ್ತಿ. ಇದುವೇ ಮಾನವ ಸಂಪನ್ಮೂಲ. ನಾವುಗಳು ಸಮಾಜದಲ್ಲಿ ಸಮಸ್ಯಾತ್ಮಕ ವ್ಯಕ್ತಿಯಾಗದೆ ಸಂಪನ್ಮೂಲ ವ್ಯಕ್ತಿಯಾಗಿ ರೂಪುಗೊಳ್ಳಬೇಕು. ಇದೊಂದು ಹಾರ್ದಿಕವಾದ ಸ್ಪರ್ಧೆ.

ಸಂತ, ಶರಣ ಆಗದೇ ಹೋದರೂ ಸಂಪನ್ಮೂಲ ವ್ಯಕ್ತಿಗಳಾಗಬೇಕು. ಭಕ್ತಿ, ಯುಕ್ತಿ, ಶಕ್ತಿ ಇರುವವರು ಸಂಪನ್ಮೂಲ ವ್ಯಕ್ತಿ. ಮುರುಘಾ ಶರಣರು, ಮುರುಘಾ ಮಠ ಬಸವಾದಿ ಶರಣರ ತತ್ವ ಮುಂದುವರಿಸುತ್ತ ಬಂದಿದೆ ಎಂದರು.

ಹೆಜ್ಜೆಹೆಜ್ಜೆಗೆ ಕಷ್ಟ ಕೊಡುತ್ತಾನೆ. ಕಷ್ಟಗಳನ್ನು ಎದುರಿಸಿದ್ದರಿಂದಹರಿಶ್ಚಂದ್ರಉಳಿದುಕೊಂಡ. ಹಾಗೆ ಬಸವಣ್ಣನ ಬದುಕಿನಲ್ಲಿ ಹೆಜ್ಜೆ ಹೆಜ್ಜೆಗೆ ಬಹಿಷ್ಕಾರಗಳು ಬಂದವು. ಕ್ರಾಂತಿಯ ಕಿಡಿಗಳು ಬಸವಣ್ಣನವರ ಮನೆಯಿಂದ ಪ್ರಾರಂಭವಾದವು. ಸಮಸ್ಯೆಗಳು ಇದ್ದಾಗ ಎದ್ದುಬರಲು ಸಾಧ್ಯ. ಆರಂಭದಿಂದಲೂ ಬಸವಣ್ಣ ಬಹಿಷ್ಕಾರಗಳ ಮಧ್ಯೆ ಬೆಳೆದರು. ಅವರಿಗೆ ತೊಂದರೆ ಕೊಟ್ಟವರು ಇತಿ-ಹಾಸದಿಂದ ಮರೆಯಾಗುವವರೆಗೆ ಬೆಳೆದರು. ಬೆಳೆದು ನಿಂತರು ಎಂದರು.

## ವಚನ ತತ್ವ ಜೀವನದಲ್ಲಿ ಅಳವಡಿಸಿಕೊಳ್ಳಿ

ಚಿತ್ರದುರ್ಗ: ವಚನಗಳು ಎಂಬ ಮಾತ್ರೆಗಳನ್ನು ಕೊಡಲಾಗಿದೆ. ವಚನಗಳಲ್ಲಿರುವ ತತ್ವಗಳನ್ನು ಪ್ರಾಯೋಗಿಕವಾಗಿ ದೈನಂದಿನ ಜೀವನದಲ್ಲಿ ಆಚರಣೆಗೆ ತರಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಸಲಹೆ ನೀಡಿದರು.

ಬೆಂಗಳೂರು ಸಿದ್ಧಮಂಗಳಾ ಸೇವಾಕೇಂದ್ರ, ಎಸ್‌ಜೆಎಂ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬಸವ ಬಳಗ ಮಸ್ಕತ್ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ (ವೆಬಿನಾರ್) ಉದ್ಘಾಟಿಸಿ ವಚನ ಸಾಹಿತ್ಯ ಬಯಲೊಳಗಣ ರೂಪು ವಿಷಯ ಕುರಿತು ಮಾತನಾಡಿ, ಜಗತ್ತಿಗೆ ವಿಧಾಯಕವಾದ ಸಿದ್ಧಾಂತ ಕೊಟ್ಟಂತಹ ದಾರ್ಶನಿಕರಿದ್ದಾರೆ. ಭಾರತದ ಇತಿ-ಹಾಸದಲ್ಲಿ ಶಾಸ್ತ್ರ, ವೇದಾಗಮ ಇತ್ಯಾದಿಯಾಗಿರುವಂತಹ ವಿಚಾರ ಸಂಸ್ಕೃತ ಭಾಷೆ ಮೂಲಕ ರಾಷ್ಟ್ರಕ್ಕೆ ಕೊಟ್ಟಿದ್ದಾರೆ. 900 ವರ್ಷಗಳ ಹಿಂದೆ ಬಸವ ಅಲ್ಲಮಾದಿ ಶರಣರು ಒಂದು ಸಿದ್ಧಾಂತ ನೀಡಿದರು. ಬಸವಣ್ಣನವರ ನೇತೃತ್ವ, ಅಲ್ಲಮನ ಅಧ್ಯಕ್ಷತೆಯಲ್ಲಿ ಜಗತ್ತಿನ ಇತಿಹಾಸದಲ್ಲಿ 770 ಅಮರಗಣಂಗಳು ಅನುಭವ ಮಂಟಪದಲ್ಲಿ ಸಮಾವೇಶಗೊಂಡಿದ್ದು ವಿರಳ. ಒಂದೊಂದು ಸಂದರ್ಭ ಒಂದೊಂದು ಇತಿಹಾಸ. ಇಂತಹ ಪರಿಣಾಮಕಾರಿಯಾದ ಪ್ರಾಯೋಗಿಕವಾದ ಸಿದ್ಧಾಂತ ಜನರು ಅರಿತುಕೊಳ್ಳುವ ಸಂದರ್ಭ ತಂದುಕೊಳ್ಳಬೇಕಿದೆ. ಎಲ್ಲ ವಿಚಾರಗಳ ಬಗೆಗೆ ಶರಣರು ವಚನಗಳ ಮೂಲಕ ಅಡಗಿಸಿಕೊಟ್ಟಿದ್ದಾರೆ. ಬ್ರಹ್ಮ ವಿಷ್ಣು ಮಹೇಶ್ವರರಾದಿಯಾಗಿ ಬಯಲರೂಪಿ ಶರಣರಿಂದ ಇವರೆಲ್ಲರೂ ಬಂದಿದ್ದಾರೆ. ವಿದ್ಯಾಬುದ್ಧಿ ಇರುವಲ್ಲಿ ಬ್ರಹ್ಮ, ಶಾಂತಿ ಸೈರಣೆ ಇರುವಲ್ಲಿ ವಿಷ್ಣು, ಕೋಪ ತಾಪ ಇರುವಲ್ಲಿ ರುದ್ರ ಇರುತ್ತಾನೆ ಎಂದು ಚೆನ್ನಬಸವಣ್ಣ ಹೇಳುತ್ತಾರೆ ಎಂದರು.

ವಚನ ಸಾಹಿತ್ಯ ಚಿಂತಕ ರಂಜಾನ್‌ದರ್ಗಾ ಮಾತನಾಡಿ, ಎಲ್ಲವೂ ಬಯಲಿನಿಂದ ಬಂದಿದೆ. ಮತ್ತೇ ಬಯಲಲ್ಲಿ ಲೀನವಾಗುವುದು ಎಂದು ಶ್ರೇಷ್ಠ ವಿಜ್ಞಾನಿ ಐನ್‌ಸ್ಟೈನ್ 12ನೇ ಶತಮಾನದಲ್ಲಿ ಶರಣ-ರು ಹೇಳಿದ್ದನ್ನೇ ಹೇಳಿದ್ದಾರೆ. ಆದ್ದರಿಂದ ಇದು ಅತ್ಯಂತ ವೈಜ್ಞಾನಿಕ ವಿಷಯ. ಚಿಂತನೆ ಮಾಡಬೇಕಿದೆ ಎಂದು ತಿಳಿಸಿದರು.

ನೀಲಕಂಠ ಹಂಗರಗಿ ಅಧ್ಯಕ್ಷೀಯ ಭಾಷಣ ಮಾಡಿದರು. ಡಾ. ಶೀಲಾದೇವಿ ಎಸ್. ಮಳಿಮಠ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸುಧಾ ಶಶಿಕಾಂತ್, ಶಿವಪ್ರಕಾಶ್ ಎನ್.ಸಿ., ಪ್ರೊ. ಜಯಶ್ರೀ ಎಂ. ಒಡೆಯರ್ ಇದ್ದರು. ಆಶಾ ಎಂ.ಆರ್. ಪ್ರಾರ್ಥಿಸಿದರು. ಎಸ್‌ಜೆಎಂ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಪಿ.ಶಿವಲಿಂಗಪ್ಪ ಸ್ವಾಗತಿಸಿದರು. ಡಾ. ಸುಮ ಆರ್. ವಂದಿಸಿದರು. ಮಹೇಶ್ವರಿ ಮತ್ತು ಆಕಾಶ್ ಎಂ.ಪಿ. ತಾಂತ್ರಿಕ ನಿರ್ವಹಣೆ ಮಾಡಿದರು.